ಕರ್ನಾಟಕ ಸರ್ಕಾರ

ಕಡತ ಸಂಖ್ಯೆ:ಪಪೂಶಿ/ಶೈಶಾ/ಹೆ.ವಿ.ದಾ/ಅನು/2016-17

ನಿರ್ದೇಶಕರ ಕಛೇರಿ,
ಪದವಿ ಪೂರ್ವ ಶಿಕ್ಷಣ ಇಲಾಖೆ,
ಸಂಪಿಗೆ ರಸ್ತೆ, ಮಲ್ಲೇಶ್ವರಂ 18ನೇ ಕ್ರಾಸ್,
ಬೆಂಗಳೂರು-12, ದಿನಾಂಕ 27-06-2016.

## ಜ್ಞಾಪನ

ವಿಷಯ: 2016-17ನೇ ಶೈಕ್ಷಣಿಕ ಸಾಲಿಗೆ ಪ್ರಥಮ ಪಿಯುಸಿ ತರಗತಿಗಳಿಗೆ 20 ಹೆಚ್ಚುವರಿ ವಿದ್ಯಾರ್ಥಿಗಳನ್ನು ದಾಖಲಾತಿ ಮಾಡಿಕೊಳ್ಳಲು ಅನುಮತಿ ನೀಡುವ ಬಗ್ಗೆ.

ಉಲ್ಲೇಖ:
1. ಜಿಲ್ಲಾ ಉಪ ನಿರ್ದೇಶಕರು ಹಾಗೂ ಪದವಿ ಪೂರ್ವ ಕಾಲೇಜುಗಳ ಪ್ರಾಚಾರ್ಯರಿಂದ ಬಂದಿರುವ ಮನವಿಗಳು
2. ಸರ್ಕಾರದ ಪತ್ರ ಸಂಖ್ಯೆ ಇಡಿ 413 ಎಸ್ ಹೆಚ್‌ಹೆಚ್ 2016 ದಿನಾಂಕ 07-06-2016

*******

ಈ ಕೆಳಕಂಡ ಪದವಿ ಪೂರ್ವ ಕಾಲೇಜುಗಳಲ್ಲಿ 2016-17ನೇ ಶೈಕ್ಷಣಿಕ ಸಾಲಿನಲ್ಲಿ ಪ್ರಥಮ ಪಿಯುಸಿ ದಾಖಲಾತಿಯಲ್ಲಿ ಪ್ರತಿ ವಿಭಾಗದಲ್ಲಿ ಗರಿಷ್ಠ 80 ವಿದ್ಯಾರ್ಥಿಗಳನ್ನು ದಾಖಲಾತಿ ಮಾಡಿಕೊಳ್ಳಲು ನಿಯಮಗಳಲ್ಲಿ ಅವಕಾಶವಿರುತ್ತದೆ. ಆದರೆ 2016ರ ಎಸ್.ಎಸ್.ಎಲ್.ಸಿ ವಾರ್ಷಿಕ ಪರೀಕ್ಷಾ ಫಲಿತಾಂಶವು ಹೆಚ್ಚಾಗಿದ್ದು, ಪ್ರಥಮ ಪಿಯುಸಿ ದಾಖಲಾತಿಗಾಗಿ ವಿದ್ಯಾರ್ಥಿಗಳಿಂದ ಮತ್ತು ಪೋಷಕರಿಂದ ಒತ್ತಡ/ಬೇಡಿಕೆ ಉಂಟಾಗುತ್ತಿರುವುದಾಗಿ ಉಲ್ಲೇಖಿತ ಪತ್ರಗಳಲ್ಲಿ ತಿಳಿಸಿರುತ್ತಾರೆ. ಸದರಿ ಕೋರಿಕೆಗಳನ್ನು ಪರಿಶೀಲಿಸಲಾಯಿತು.

2016ರ ಎಸ್.ಎಸ್.ಎಲ್.ಸಿ ವಾರ್ಷಿಕ ಫಲಿತಾಂಶದ ಶೇಕಡಾ ಪ್ರಮಾಣವು ಹೆಚ್ಚಾಗಿರುವುದರಿಂದ, ಸಹಜವಾಗಿ ಹಲವು ಪದವಿ ಪೂರ್ವ ಕಾಲೇಜುಗಳಲ್ಲಿ ಪ್ರಥಮ ಪಿಯುಸಿ ದಾಖಲಾತಿಗೆ ಹೆಚ್ಚಿನ ಬೇಡಿಕೆ ಉಂಟಾಗುತ್ತಿರುವುದನ್ನು ಗಮನಿಸಿ 2016-17ನೇ ಶೈಕ್ಷಣಿಕ ಸಾಲಿಗೆ ಮಾತ್ರ ಅನ್ವಯಿಸಿ ಪ್ರತಿ ಕಾಲೇಜಿನ ಮುಂದೆ ನಮೂದಿಸಿರುವ ಸಂಯೋಜನೆ ಮತ್ತು ವಿಭಾಗಗಳಲ್ಲಿ ಹೆಚ್ಚುವರಿಯಾಗಿ ಗರಿಷ್ಠ 20 (ಇಪ್ಪತ್ತು) ವಿದ್ಯಾರ್ಥಿಗಳನ್ನು ದಾಖಲಾತಿ ಮಾಡಿಕೊಳ್ಳಲು ಕೆಳಕಂಡ ಷರತ್ತುಗಳಿಗೆ ಒಳಪಡಿಸಿ ಅನುಮತಿ ನೀಡಲಾಗಿದೆ.

| ಕ್ರಸ | ಕಾಲೇಜಿನ ಸಂಕೇತ ಸಂಖ್ಯೆ | ಕಾಲೇಜಿನ ಹೆಸರು ಮತ್ತು ವಿಳಾಸ | ಸಂಯೋಜನೆ ಮತ್ತು ವಿಷಯ ಸಂಕೇತ ಸಂಖ್ಯೆಗಳು |
|---|---|---|---|
| 01 | EE-027 | ಎಸ್.ಎಸ್ ಪದವಿ ಪೂರ್ವ ಕಾಲೇಜು, ಬಬಲೇಶ್ವರ ತಾಲ್ಲೂಕು. ವಿಜಯಪುರ ಜಿಲ್ಲೆ. | GSPEd-24.28.29.52<br>EGBA-22.27.29.30 |
| 02 | EE-058 | ಸಿಕ್ಯಾಬ ಬಾಲಕರ ಪದವಿ ಪೂರ್ವ ಕಾಲೇಜು, ವಿಜಯಪುರ, | PCMB-33.34.35.36 |
| 03 | UU-298 | ಎಸ್.ಬಿ.ಜಿ ಪದವಿ ಪೂರ್ವ ಕಾಲೇಜು, ಮಾಯಸಂದ್ರ ಟಿ.ಬಿ. ತುರುವೇಕೆರೆ ತಾಲ್ಲೂಕು, ತುಮಕೂರು ಜಿಲ್ಲೆ. | PCMB-33.34.35.36 |
| 04 | VV-044 | ಸಂತ ಜೋಸೆಫರ ಪದವಿ ಪೂರ್ವ ಕಾಲೇಜು, ಮಡಿಕೇರಿ, ಕೊಡಗು ಜಿಲ್ಲೆ. | PCMB-33.34.35.36<br>PCMC-33.34.35.41 |
| 05 | VV-042 | ಸಂತ ಮೈಕಲರ ಪದವಿ ಪೂರ್ವ ಕಾಲೇಜು, ಮಡಿಕೇರಿ, ಕೊಡಗು ಜಿಲ್ಲೆ. | PCMB-33.34.35.36<br>PCMC-33.34.35.41<br>HEBA-21.22.27.30<br>EBAC-22.27.30.41 |
| 06 | QQ-086 | ಎಮ್.ಇ.ಎಸ್ ಚೈತನ್ಯ ಪದವಿ ಪೂರ್ವ ಕಾಲೇಜು, ಶಿರಸಿ, ಉತ್ತರ ಕನ್ನಡ ಜಿಲ್ಲೆ. | PCMB-33.34.35.36<br>PCMCs-33.34.35.41<br>PCMS-33.34.35.31<br>EGBA-22.24.27.30<br>EBAS-22.27.30.31 |

..2

| | | | |
|---|---|---|---|
| 07 | MC-037 | ಎ.ವಿ.ಎನ್.ಆರ್, ಪದವಿ ಪೂರ್ವ ಕಾಲೇಜು, ತೊಂಡೇಭಾವಿ, ಗೌರಿಬಿದನೂರು ತಾಲ್ಲೂಕು, ಚಿಕ್ಕಬಳ್ಳಾಪುರ ಜಿಲ್ಲೆ. | HEBA-21.22.27.30 |
| 08 | DD-132 | ಶ್ರೀ ಹರಿ ವಿದ್ಯಾಲಯ ಪದವಿ ಪೂರ್ವ ಕಾಲೇಜು, ಉಗಾರ. ಖುರ್ದ ತಾಲ್ಲೂಕು, ಅಥಣಿ. | EBACs-22.27.30.41 |
| 09 | CC-103 | ಇಂದು ಪದವಿ ಪೂರ್ವ ಮಹಾವಿದ್ಯಾಲಯ, ಕೊಟ್ಟೂರು, ಬಳ್ಳಾರಿ ಜಿಲ್ಲೆ. | HEKEd-16.21.29.52<br>HESEd-16.21.28.52 |
| 10 | AS-857 | ಫೀಟ್‌ಜೀ ಪದವಿ ಪೂರ್ವ ಕಾಲೇಜು, ನಂ,19, ಎಸ್ ಎಸ್ ಪ್ಲಾಜಾ, 13ನೇ ಕ್ರಾಸ್, 6ನೇ ಸೆಕ್ಟರ್, ಹೆಚ್ ಎಸ್.ಆರ್ ಲೇಔಟ್, ಬೆಂಗಳೂರು. | PCMCs-33.34.35.41 |
| 11 | JJ-359 | ಪ್ರಿಜಮ್ ಸ್ವತಂತ್ರ ಪದವಿ ಪೂರ್ವ ಕಾಲೇಜು, ತಿಮ್ಮನಗೌಡ ಬಿಲ್ಡಿಂಗ್, ಸಪ್ತಾಪೂರ, ಧಾರವಾಡ ಜಿಲ್ಲೆ. | PCMB-33.34.35.36 |
| 12 | SS-156 | ಶ್ರೀ ದುರ್ಗಾಪರಮೇಶ್ವರಿ ಟೆಂಪಲ್ ಪದವಿ ಪೂರ್ವ ಕಾಲೇಜು, ಮಂದಾರ್ತಿ, ಉಡುಪಿ ಜಿಲ್ಲೆ. | EBAS-22.27.30.31<br>HEBA-21.22.27.30 |
| 13 | SS-002 | ಸಂತ ಅಲೋಶಿಯಸ್ ಪದವಿ ಪೂರ್ವ ಕಾಲೇಜು, ಮಂಗಳೂರು. | PCMC-33.34.35.41<br>CEBA-22.27.30.41<br>CSBA-27.30.31.41<br>SEBA-22.27.30.31 |
| 14 | SU-027 | ಮಿಲಾಗ್ರಿಸ್ ಪದವಿ ಪೂರ್ವ ಕಾಲೇಜು, ಕಲ್ಯಾಣಪುರ, ಉಡುಪಿ ಜಿಲ್ಲೆ | HEBA-21.22.27.30<br>ESBA-22.31.27.30 |
| 15 | HH-007 | ಶ್ರೀ ಜಗದ್ಗುರು ಚಂದ್ರಶೇಖರ ಭಾರತೀ ಮೆಮೋರಿಯಲ್ ಪದವಿ ಪೂರ್ವ ಕಾಲೇಜು, ಶೃಂಗೇರಿ, | PCMB-33.34.35.36<br>EBAC-22.27.30.41<br>HEBA-20.22.27.30 |
| 16 | QQ-010 | ಎಂ.ಇ.ಎಸ್ ಪದವಿ ಪೂರ್ವ ಕಾಲೇಜು, ಶಿರಸಿ. ಉತ್ತರ ಕನ್ನಡ ಜಿಲ್ಲೆ. | PCMB-33.34.35.36<br>PCMC-33.34.35.41<br>PCMS-33.34.35.31 |
| 17 | CC-166 | ಬಿ.ಪಿ.ಎಸ್.ಸಿ ಪದವಿ ಪೂರ್ವ ಕಾಲೇಜ್, ಬಳ್ಳಾರಿ, | CEBA-41.22.27.30 |
| 18 | JG-046 | ಎಸ್.ಎಂ.ಭೂಮರರೆಡ್ಡಿ, ಪದವಿ ಪೂರ್ವ ಕಾಲೇಜು, ಗಜೇಂದ್ರಗಡ, ಗದಗ ಜಿಲ್ಲೆ. | HEBA-21.22.27.30 |
| 19 | JG-335 | ತೋಂಟದ ಸಿದ್ದೇಶ್ವರ ಪದವಿ ಪೂರ್ವ ಕಾಲೇಜು, ಗದಗ | SEBA-31.22.27.30 |
| 20 | FF-064 | ರಾಮ ಮತ್ತು ರಾಜ ಸ್ವತಂತ್ರ ಪದವಿ ಪೂರ್ವ ಕಾಲೇಜು, ಹುಮನಾಬಾದ, ಬೀದರ ಜಿಲ್ಲೆ. | PCMB-33.34.35.36<br>HEBA-21.22.27.30<br>HEPS-21.22.28.29 |

ಷರತ್ತುಗಳು:

1. ಈ ಅನುಮತಿಯು 2016-17ನೇ ಶೈಕ್ಷಣಿಕ ಸಾಲಿನ ಪ್ರಥಮ ಪಿಯುಸಿ ದಾಖಲಾತಿಗೆ ಮಾತ್ರ ಅನ್ವಯಿಸುತ್ತದೆ.
2. ಮುಂದಿನ ಶೈಕ್ಷಣಿಕ ವರ್ಷಗಳಲ್ಲಿ ಪೂರ್ವಾನುಮತಿ ಇಲ್ಲದೆ 80 ವಿದ್ಯಾರ್ಥಿಗಳಿಗಿಂತ ಹೆಚ್ಚಿನ ವಿದ್ಯಾರ್ಥಿಗಳನ್ನು ದಾಖಲು ಮಾಡಿಕೊಳ್ಳಬಾರದು.
3. ಹೆಚ್ಚುವರಿ ವಿದ್ಯಾರ್ಥಿಗಳಿಗೆ ಶೈಕ್ಷಣಿಕ ಮಾರ್ಗಸೂಚಿಯಲ್ಲಿ ನಿಗದಿಪಡಿಸಿರುವ ಶುಲ್ಕಗಳನ್ನು ಮಾತ್ರ ಪಡೆಯತಕ್ಕದ್ದು.
4. ಹಾಲಿ ಅನುಮತಿಸಿರುವ ಹೆಚ್ಚುವರಿ 20 ವಿದ್ಯಾರ್ಥಿಗಳನ್ನು ಈಗಾಗಲೇ ಇಲಾಖೆಯಿಂದ ಬೋಧಿಸಲು ಮಂಜೂರಾತಿ ನೀಡಿರುವ ಭಾಷಾ ವಿಷಯ, ಐಚ್ಛಿಕ ವಿಷಯ ಮತ್ತು ಸಂಯೋಜನೆಗಳಿಗೆ ಮಾತ್ರ ಹಾಗೂ ವಿಭಾಗಗಳಿಗೆ ಮಾತ್ರ ಅನ್ವಯಿಸುವುದು. ಇಲಾಖೆಯಿಂದ ಬೋಧಿಸಲು ಮಂಜೂರಾತಿ ಪಡೆಯದೇ ಇರುವ ಭಾಷಾ ವಿಷಯ, ಸಂಯೋಜನೆಗಳಿಗೆ ವಿದ್ಯಾರ್ಥಿಗಳನ್ನು ದಾಖಲಾತಿ ಮಾಡಿಕೊಳ್ಳತಕ್ಕದ್ದಲ್ಲ.

...3

5. ಹೆಚ್ಚುವರಿ ವಿದ್ಯಾರ್ಥಿಗಳ ಬೋಧನೆಯನ್ನು ಹಾಲಿ ನೇಮಕ ಮಾಡಿಕೊಂಡಿರುವ ಉಪನ್ಯಾಸಕರಿಂದಲೇ ಬೋಧಿಸತಕ್ಕದ್ದು. ಹೆಚ್ಚುವರಿ ಉಪನ್ಯಾಸಕರ ನೇಮಕಾತಿಗೆ ಅವಕಾಶವಿರುವುದಿಲ್ಲ.

6 ಹೆಚ್ಚುವರಿ ವಿದ್ಯಾರ್ಥಿಗಳ ದಾಖಲಾತಿಯಿಂದ ಯಾವುದೇ ರೀತಿಯಲ್ಲಿ ಸರ್ಕಾರಕ್ಕೆ ಆರ್ಥಿಕ ನಷ್ಟ ಉಂಟು ಮಾಡತಕ್ಕದ್ದಲ್ಲ.

7. ಹೆಚ್ಚುವರಿ ವಿದ್ಯಾರ್ಥಿಗಳನ್ನು ದಾಖಲಾತಿ ಮಾಡಿಕೊಂಡಿರುವುದರಿಂದ ಸಮೀಪದ ಅಥವಾ ನೆರೆಹೊರೆಯ ಇತರೆ ಪದವಿ ಪೂರ್ವ ಕಾಲೇಜುಗಳಲ್ಲಿ ವಿದ್ಯಾರ್ಥಿಗಳ ದಾಖಲಾತಿ ಕೊರತೆ ಉಂಟಾಗಬಾರದು ಮತ್ತು ಅನಾರೋಗ್ಯಕರ ಸ್ಪರ್ಧೆ ಉಂಟಾಗಬಾರದು.

8. ಹೆಚ್ಚುವರಿ ವಿದ್ಯಾರ್ಥಿಗಳ ದಾಖಲಾತಿ ಮಾಡಿಕೊಳ್ಳುವ ಮುನ್ನ ಪದವಿ ಪೂರ್ವ ಶಿಕ್ಷಣ ನಿಯಮಗಳು 2006ರ ನಿಯಮ 4ಕ್ಕೆ ಅನುಗುಣವಾಗಿ ಸದರಿ ವಿದ್ಯಾರ್ಥಿಗಳಿಗೆ ಅಗತ್ಯ/ಮೂಲಭೂತ ಸೌಲಭ್ಯಗಳು ಇರುವುದನ್ನು ಅಥವಾ ಹೊಂದಿಸಿಕೊಂಡಿರುವುದನ್ನು ಖಾತ್ರಿಪಡಿಸಿಕೊಂಡ ನಂತರವೇ ಹೆಚ್ಚುವರಿ ವಿದ್ಯಾರ್ಥಿಗಳ ದಾಖಲಾತಿ ಮಾಡಿಕೊಳ್ಳತಕ್ಕದ್ದು.

9. ವಿದ್ಯಾರ್ಥಿಗಳ ದಾಖಲಾತಿ ಸಂಖ್ಯೆಗೆ ಅನುಗುಣವಾಗಿ ಕೊಠಡಿಗಳ ವಿಸ್ತೀರ್ಣ ಮತ್ತು ಸಂಖ್ಯೆ ಸರಿ ಹೊಂದಿದಲ್ಲಿ ಮಾತ್ರ ವಿದ್ಯಾರ್ಥಿಗಳ ದಾಖಲಾತಿ ಮಾಡಿಕೊಳ್ಳತಕ್ಕದ್ದು.

10. ಹೆಚ್ಚುವರಿ ವಿದ್ಯಾರ್ಥಿಗಳನ್ನು ದಾಖಲಾತಿ ಮಾಡಿಕೊಂಡ ಬಗ್ಗೆ ಪ್ರತಿಯೊಂದು ಸಂಯೋಜನೆ ಮತ್ತು ವಿಭಾಗಗಳಲ್ಲಿ ದಾಖಲಾದ ವಿದ್ಯಾರ್ಥಿಗಳ ಸಂಖ್ಯೆಯ ಮಾಹಿತಿಯನ್ನು ಜಿಲ್ಲಾ ಉಪ ನಿರ್ದೇಶಕರ ಮೂಲಕ ಈ ಕಛೇರಿಗೆ ಸಲ್ಲಿಸತಕ್ಕದ್ದು.

11. ಈ ಹೆಚ್ಚುವರಿ ವಿಭಾಗಗಳ ದಾಖಲಾತಿಯು ಹೆಚ್ಚುವರಿ ಸಂಯೋಜನೆ ಅಥವಾ ಹೆಚ್ಚುವರಿ ವಿಭಾಗದ ಮಂಜೂರತಿ ಎಂದು ಪರಿಗಣಿಸತಕ್ಕದ್ದಲ್ಲ.

12. ಹೆಚ್ಚುವರಿ ವಿಷಯ/ಸಂಯೋಜನೆ ಮಂಜೂರಾತಿಯಿಂದ ಯಾವುದೇ ರೀತಿಯ ಅನಾರೋಗ್ಯಕರ ಸ್ಪರ್ಧೆ ಉಂಟಾಗಬಾರದು ಹಾಗೂ ಈಗಾಗಲೇ ಅಸ್ತಿತ್ವದಲ್ಲಿರುವ ಸುತ್ತಮುತ್ತಲಿನ ಕಾಲೇಜುಗಳ ಬೆಳವಣಿಗೆ ಹಾಗೂ ಅಭಿವೃದ್ಧಿಗೆ ದಕ್ಕೆ ಉಂಟಾಗಬಾರದು ಮತ್ತು ಈ ಬಗ್ಗೆ ಹೆಚ್ಚುವರಿ ವಿಭಾಗಗಳ ಸಂಬಂಧದಲ್ಲಿ ನೆರೆಹೊರೆಯ ಕಾಲೇಜುಗಳಿಂದ ಅಥವಾ ಪೋಷಕರಿಂದ ಆಕ್ಷೇಪಣೆಗಳು ಬಂದಲ್ಲಿ ಅವುಗಳನ್ನು ಗಂಭೀರವಾಗಿ ಪರಿಗಣಿಸಲಾಗುವುದು.

ನಿರ್ದೇಶಕರು
ಪದವಿ ಪೂರ್ವ ಶಿಕ್ಷಣ ಇಲಾಖೆ.

<u>ಪ್ರತಿಗಳು,</u>

1. ಸಂಭಂದಪಟ್ಟ ಜಿಲ್ಲಾ ಉಪ ನಿರ್ದೇಶಕರುಗಳಿಗೆ – ಮಾಹಿತಿಗಾಗಿ
2. ಸಂಭಂದಪಟ್ಟ ಪದವಿ ಪೂರ್ವ ಕಾಲೇಜುಗಳ ಪ್ರಾಂಶುಪಾಲರುಗಳಿಗೆ.
3. ಕಛೇರಿ ಪ್ರತಿ.

ಕರ್ನಾಟಕ ಸರ್ಕಾರ

ಕಡತ ಸಂಖ್ಯೆ:ಪಮೂಶಿ/ಶೈಶಾ/ಹೆ.ವಿ.ದಾ/ಅನು/2016-17

ನಿರ್ದೇಶಕರ ಕಛೇರಿ,
ಪದವಿ ಪೂರ್ವ ಶಿಕ್ಷಣ ಇಲಾಖೆ,
ಸಂಪಿಗೆ ರಸ್ತೆ, ಮಲ್ಲೇಶ್ವರಂ 18ನೇ ಕ್ರಾಸ್,
ಬೆಂಗಳೂರು-12, ದಿನಾಂಕ 28-06-2016.

## ಜ್ಞಾಪನ

ವಿಷಯ: 2016-17ನೇ ಶೈಕ್ಷಣಿಕ ಸಾಲಿಗೆ ಪ್ರಥಮ ಪಿಯುಸಿ ತರಗತಿಗಳಿಗೆ 20 ಹೆಚ್ಚುವರಿ ವಿದ್ಯಾರ್ಥಿಗಳನ್ನು ದಾಖಲಾತಿ ಮಾಡಿಕೊಳ್ಳಲು ಅನುಮತಿ ನೀಡುವ ಬಗ್ಗೆ.

ಉಲ್ಲೇಖ:
1. ಜಿಲ್ಲಾ ಉಪ ನಿರ್ದೇಶಕರು ಹಾಗೂ ಪದವಿ ಪೂರ್ವ ಕಾಲೇಜುಗಳ ಪ್ರಾಚಾರ್ಯರಿಂದ ಬಂದಿರುವ ಮನವಿಗಳು
2. ಸರ್ಕಾರದ ಪತ್ರ ಸಂಖ್ಯೆ ಇಡಿ 413 ಎಸ್ ಹೆಚ್‌ಹೆಚ್ 2016 ದಿನಾಂಕ 07-06-2016

*******

ಈ ಕೆಳಕಂಡ ಪದವಿ ಪೂರ್ವ ಕಾಲೇಜುಗಳಲ್ಲಿ 2016-17ನೇ ಶೈಕ್ಷಣಿಕ ಸಾಲಿನಲ್ಲಿ ಪ್ರಥಮ ಪಿಯುಸಿ ದಾಖಲಾತಿಯಲ್ಲಿ ಪ್ರತಿ ವಿಭಾಗದಲ್ಲಿ ಗರಿಷ್ಠ 80 ವಿದ್ಯಾರ್ಥಿಗಳನ್ನು ದಾಖಲಾತಿ ಮಾಡಿಕೊಳ್ಳಲು ನಿಯಮಗಳಲ್ಲಿ ಅವಕಾಶವಿರುತ್ತದೆ. ಆದರೆ 2016ರ ಎಸ್.ಎಸ್.ಎಲ್.ಸಿ ವಾರ್ಷಿಕ ಪರೀಕ್ಷಾ ಪಲಿತಾಂಶವು ಹೆಚ್ಚಾಗಿದ್ದು, ಪ್ರಥಮ ಪಿಯುಸಿ ದಾಖಲಾತಿಗಾಗಿ ವಿದ್ಯಾರ್ಥಿಗಳಿಂದ ಮತ್ತು ಪೋಷಕರಿಂದ ಒತ್ತಡ/ಬೇಡಿಕೆ ಉಂಟಾಗುತ್ತಿರುವುದಾಗಿ ಉಲ್ಲೇಖಿತ ಪತ್ರಗಳಲ್ಲಿ ತಿಳಿಸಿರುತ್ತಾರೆ. ಸದರಿ ಕೋರಿಕೆಗಳನ್ನು ಪರಿಶೀಲಿಸಲಾಯಿತು.

2016ರ ಎಸ್.ಎಸ್.ಎಲ್.ಸಿ ವಾರ್ಷಿಕ ಫಲಿತಾಂಶದ ಶೇಕಡಾ ಪ್ರಮಾಣವು ಹೆಚ್ಚಾಗಿರುವುದರಿಂದ, ಸಹಜವಾಗಿ ಹಲವು ಪದವಿ ಪೂರ್ವ ಕಾಲೇಜುಗಳಲ್ಲಿ ಪ್ರಥಮ ಪಿಯುಸಿ ದಾಖಲಾತಿಗೆ ಹೆಚ್ಚಿನ ಬೇಡಿಕೆ ಉಂಟಾಗುತ್ತಿರುವುದನ್ನು ಗಮನಿಸಿ 2016-17ನೇ ಶೈಕ್ಷಣಿಕ ಸಾಲಿಗೆ ಮಾತ್ರ ಅನ್ವಯಿಸಿ. ಪ್ರತಿ ಕಾಲೇಜಿನ ಮುಂದೆ ನಮೂದಿಸಿರುವ ಸಂಯೋಜನೆ ಮತ್ತು ವಿಭಾಗಗಳಲ್ಲಿ ಹೆಚ್ಚುವರಿಯಾಗಿ ಗರಿಷ್ಠ 20 (ಇಪ್ಪತ್ತು) ವಿದ್ಯಾರ್ಥಿಗಳನ್ನು ದಾಖಲಾತಿ ಮಾಡಿಕೊಳ್ಳಲು ಕೆಳಕಂಡ ಷರತ್ತುಗಳಿಗೆ ಒಳಪಡಿಸಿ ಅನುಮತಿ ನೀಡಲಾಗಿದೆ.

| ಕ್ರಸ | ಕಾಲೇಜಿನ ಸಂಕೇತ ಸಂಖ್ಯೆ | ಕಾಲೇಜಿನ ಹೆಸರು ಮತ್ತು ವಿಳಾಸ | ಸಂಯೋಜನೆ ಮತ್ತು ವಿಷಯ ಸಂಕೇತ ಸಂಖ್ಯೆಗಳು |
|---|---|---|---|
| 01 | DD-179 | ಅಂಜುಮನ್ ಕಲಾ ವಾಣಿಜ್ಯ ಮತ್ತು ವಿಜ್ಞಾನ ಪದವಿ ಪೂರ್ವ ಕಾಲೇಜು, ಜಿಲ್ಲಾ ಕೋರ್ಟ ಎದುರಿಗೆ, ಬೆಳಗಾವಿ | HEBA-21.22.27.30<br>EBACs-22.27.30.41 |
| 02 | DD-370 | ಶ್ರೀ ಸಾಯಿ ವಿಜ್ಞಾನ ಮತ್ತು ವಾಣಿಜ್ಯ ಪದವಿ ಪೂರ್ವ ಕಾಲೇಜು, ಮೂಡಲಗಿ, ಗೋಕಾಕ ತಾಲ್ಲೂಕು, ಬೆಳಗಾವಿ ಜಿಲ್ಲೆ. | HEBA-21.22.27.30 |
| 03 | GD-333 | ದವನ್ ಪದವಿ ಪೂರ್ವ ಕಾಲೇಜು, ದಾವಣಗೆರೆ. | EBAS-22.27.30.31<br>EBACs-22.27.30.41 |
| 04 | TT-163 | ಅಕ್ಷರ ಸಂಯುಕ್ತ ಪದವಿ ಪೂರ್ವ ಕಾಲೇಜು, ಸವಳಂಗ ರಸ್ತೆ, ಚನ್ನಮುಂಬಾಪುರ, ಶಿವಮೊಗ್ಗ ಜಿಲ್ಲೆ. | PCMB-33.34.35.36<br>PCMCs-33.34.35.41<br>EBAS-22.27.30.31 |
| 05 | NN-225 | ವಿಜಯ ವಿಠಲ ಸಂಯುಕ್ತ ಪದವಿ ಪೂರ್ವ ಕಾಲೇಜು, ಸರಸ್ವತಿಪುರಂ, ಮೈಸೂರು. | PCMCs-33.34.35.41<br>EBAC-21.22.27.30 |

....2

| | | | |
|---|---|---|---|
| 06 | EB-019 | ಶ್ರೀ ಜಿ ಎಮ್ ಕೆ ಪದವಿ ಪೂರ್ವ ಕಾಲೇಜು, ಬಾದಾಮಿ, ಬಾಗಲಕೋಟೆ ಜಿಲ್ಲೆ. | PCMB-33,34,35,36<br>PCMCs-33.34.35.41<br>HEGP-21.22.24.29<br>HEPEd-21.22.29.52<br>EBPA-22.27.29.30 |
| 07 | AS-752 | ಗೋಪಾಲನ್ ಪದವಿ ಪೂರ್ವ ಕಾಲೇಜು, ನಂ.13, ದೊಡ್ಡನೆಕ್ಕುಂಡಿ, 2ನೇ ಹಂತ, ಬ್ರೂಕ್ ಫೀಲ್ಡ್ ರಸ್ತೆ, ಬೆಂಗಳೂರು. | EBACs-22.27.30.41 |
| 08 | EE-.32 | ಶ್ರೀ ಶಾಂತೇಶ್ವರ ಪದವಿ ಪೂರ್ವ ಕಾಲೇಜು, ಇಂಡಿ, ಬಿಜಾಪುರ ಜಿಲ್ಲೆ. | PCMB-33.34.35.36<br>HESP-21.22.28.29<br>HEPK-16.21.22.29<br>EBPA-22.27.29.30<br>HESEd-21.22.28.52 |
| 09 | AN-025 | ಸಂತ ಜೋಸೆಫರ ಪದವಿ ಪೂರ್ವ ಕಾಲೇಜು, ಫೀಲ್ಡ್ ಮಾರ್ಷಲ್ ಕೆ.ಎಂ. ಕಾರ್ಯಪ್ಪ ರಸ್ತೆ, ಬೆಂಗಳೂರು. | PCMB-33.34.35.36<br>PCME-33.34.35.40<br>PCMC-33.34.35.41<br>MEBA-75.22.27.30<br>MSBA-75.31.27.30<br>CEBA-41.22.27.30<br>CSBA-41.31.27.30 |
| 10 | EE-30 | ಎಸ್.ಕೆ. ಪದವಿ ಪೂರ್ವ ಕಾಲೇಜು, ತಾಳಿಕೋಟೆ, ಬಿಜಾಪೂರ ಜಿಲ್ಲೆ. | HESEd-21.22.28.52 |

ಷರತ್ತುಗಳು:

1. ಈ ಅನುಮತಿಯು 2016–17ನೇ ಶೈಕ್ಷಣಿಕ ಸಾಲಿನ ಪ್ರಥಮ ಪಿಯುಸಿ ದಾಖಲಾತಿಗೆ ಮಾತ್ರ ಅನ್ವಯಿಸುತ್ತದೆ.
2. ಮುಂದಿನ ಶೈಕ್ಷಣಿಕ ವರ್ಷಗಳಲ್ಲಿ ಪೂರ್ವಾನುಮತಿ ಇಲ್ಲದೆ 80 ವಿದ್ಯಾರ್ಥಿಗಳಿಗಿಂತ ಹೆಚ್ಚಿನ ವಿದ್ಯಾರ್ಥಿಗಳನ್ನು ದಾಖಲು ಮಾಡಿಕೊಳ್ಳಬಾರದು.
3. ಹೆಚ್ಚುವರಿ ವಿದ್ಯಾರ್ಥಿಗಳಿಗೆ ಶೈಕ್ಷಣಿಕ ಮಾರ್ಗಸೂಚಿಯಲ್ಲಿ ನಿಗದಿಪಡಿಸಿರುವ ಶುಲ್ಕಗಳನ್ನು ಮಾತ್ರ ಪಡೆಯತಕ್ಕದ್ದು.
4. ಹಾಲಿ ಅನುಮತಿಸಿರುವ ಹೆಚ್ಚುವರಿ 20 ವಿದ್ಯಾರ್ಥಿಗಳನ್ನು ಈಗಾಗಲೇ ಇಲಾಖೆಯಿಂದ ಬೋಧಿಸಲು ಮಂಜೂರಾತಿ ನೀಡಿರುವ ಭಾಷಾ ವಿಷಯ, ಐಚ್ಛಿಕ ವಿಷಯ ಮತ್ತು ಸಂಯೋಜನೆಗಳಿಗೆ ಮಾತ್ರ ಹಾಗೂ ವಿಭಾಗಗಳಿಗೆ ಮಾತ್ರ ಅನ್ವಯಿಸುವುದು. ಇಲಾಖೆಯಿಂದ ಬೋಧಿಸಲು ಮಂಜೂರಾತಿ ಪಡೆಯದೇ ಇರುವ ಭಾಷಾ ವಿಷಯ, ಸಂಯೋಜನೆಗಳಿಗೆ ವಿದ್ಯಾರ್ಥಿಗಳನ್ನು ದಾಖಲಾತಿ ಮಾಡಿಕೊಳ್ಳತಕ್ಕದ್ದಲ್ಲ.
5. ಹೆಚ್ಚುವರಿ ವಿದ್ಯಾರ್ಥಿಗಳ ಬೋಧನೆಯನ್ನು ಹಾಲಿ ನೇಮಕ ಮಾಡಿಕೊಂಡಿರುವ ಉಪನ್ಯಾಸಕರಿಂದಲೇ ಬೋಧಿಸತಕ್ಕದ್ದು. ಹೆಚ್ಚುವರಿ ಉಪನ್ಯಾಸಕರ ನೇಮಕಾತಿಗೆ ಅವಕಾಶವಿರುವುದಿಲ್ಲ.
6. ಹೆಚ್ಚುವರಿ ವಿದ್ಯಾರ್ಥಿಗಳ ದಾಖಲಾತಿಯಿಂದ ಯಾವುದೇ ರೀತಿಯಲ್ಲಿ ಸರ್ಕಾರಕ್ಕೆ ಆರ್ಥಿಕ ನಷ್ಟ ಉಂಟು ಮಾಡತಕ್ಕದ್ದಲ್ಲ.
7. ಹೆಚ್ಚುವರಿ ವಿದ್ಯಾರ್ಥಿಗಳನ್ನು ದಾಖಲಾತಿ ಮಾಡಿಕೊಂಡಿರುವುದರಿಂದ ಸಮೀಪದ ಅಥವಾ ನೆರೆಹೊರೆಯ ಇತರೆ ಪದವಿ ಪೂರ್ವ ಕಾಲೇಜುಗಳಲ್ಲಿ ವಿದ್ಯಾರ್ಥಿಗಳ ದಾಖಲಾತಿ ಕೊರತೆ ಉಂಟಾಗಬಾರದು ಮತ್ತು ಅನಾರೋಗ್ಯಕರ ಸ್ಪರ್ದೆ ಉಂಟಾಗಬಾರದು.
8. ಹೆಚ್ಚುವರಿ ವಿದ್ಯಾರ್ಥಿಗಳ ದಾಖಲಾತಿ ಮಾಡಿಕೊಳ್ಳುವ ಮುನ್ನ ಪದವಿ ಪೂರ್ವ ಶಿಕ್ಷಣ ನಿಯಮಗಳು 2006ರ ನಿಯಮ 4ಕ್ಕೆ ಅನುಗುಣವಾಗಿ ಸದರಿ ವಿದ್ಯಾರ್ಥಿಗಳಿಗೆ ಅಗತ್ಯ/ಮೂಲಭೂತ ಸೌಲಭ್ಯಗಳು ಇರುವುದನ್ನು ಅಥವಾ ಹೊಂದಿಸಿಕೊಂಡಿರುವುದನ್ನು ಖಾತ್ರಿಪಡಿಸಿಕೊಂಡ ನಂತರವೇ ಹೆಚ್ಚುವರಿ ವಿದ್ಯಾರ್ಥಿಗಳ ದಾಖಲಾತಿ ಮಾಡಿಕೊಳ್ಳತಕ್ಕದ್ದು.
9. ವಿದ್ಯಾರ್ಥಿಗಳ ದಾಖಲಾತಿ ಸಂಖ್ಯೆಗೆ ಅನುಗುಣವಾಗಿ ಕೊಠಡಿಗಳ ವಿಸ್ತೀರ್ಣ ಮತ್ತು ಸಂಖ್ಯೆ ಸರಿ ಹೊಂದಿದಲ್ಲಿ ಮಾತ್ರ ವಿದ್ಯಾರ್ಥಿಗಳ ದಾಖಲಾತಿ ಮಾಡಿಕೊಳ್ಳತಕ್ಕದ್ದು.

..3

10. ಹೆಚ್ಚುವರಿ ವಿದ್ಯಾರ್ಥಿಗಳನ್ನು ದಾಖಲಾತಿ ಮಾಡಿಕೊಂಡ ಬಗ್ಗೆ ಪ್ರತಿಯೊಂದು ಸಂಯೋಜನೆ ಮತ್ತು ವಿಭಾಗಗಳಲ್ಲಿ ದಾಖಲಾದ ವಿದ್ಯಾರ್ಥಿಗಳ ಸಂಖ್ಯೆಯ ಮಾಹಿತಿಯನ್ನು ಜಿಲ್ಲಾ ಉಪ ನಿರ್ದೇಶಕರ ಮೂಲಕ ಈ ಕಛೇರಿಗೆ ಸಲ್ಲಿಸತಕ್ಕದ್ದು.

11. ಈ ಹೆಚ್ಚುವರಿ ವಿಭಾಗಗಳ ದಾಖಲಾತಿಯು ಹೆಚ್ಚುವರಿ ಸಂಯೋಜನೆ ಅಥವಾ ಹೆಚ್ಚುವರಿ ವಿಭಾಗದ ಮಂಜೂರತಿ ಎಂದು ಪರಿಗಣಿಸತಕ್ಕದ್ದಲ್ಲ.

12. ಹೆಚ್ಚುವರಿ ವಿಷಯ/ಸಂಯೋಜನೆ ಮಂಜೂರಾತಿಯಿಂದ ಯಾವುದೇ ರೀತಿಯ ಅನಾರೋಗ್ಯಕರ ಸ್ಪರ್ಧೆ ಉಂಟಾಗಬಾರದು ಹಾಗೂ ಈಗಾಗಲೇ ಅಸ್ತಿತ್ವದಲ್ಲಿರುವ ಸುತ್ತಮುತ್ತಲಿನ ಕಾಲೇಜುಗಳ ಬೆಳವಣಿಗೆ ಹಾಗೂ ಅಭಿವೃದ್ಧಿಗೆ ದಕ್ಕೆ ಉಂಟಾಗಬಾರದು ಮತ್ತು ಈ ಬಗ್ಗೆ ಹೆಚ್ಚುವರಿ ವಿಭಾಗಗಳ ಸಂಬಂಧದಲ್ಲಿ ನೆರೆಹೊರೆಯ ಕಾಲೇಜುಗಳಿಂದ ಅಥವಾ ಪೋಷಕರಿಂದ ಆಕ್ಷೇಪಣೆಗಳು ಬಂದಲ್ಲಿ ಅವುಗಳನ್ನು ಗಂಭೀರವಾಗಿ ಪರಿಗಣಿಸಲಾಗುವುದು.

ನಿರ್ದೇಶಕರು
ಪದವಿ ಪೂರ್ವ ಶಿಕ್ಷಣ ಇಲಾಖೆ.

<u>ಪ್ರತಿಗಳು,</u>

1. ಸಂಭಂದಪಟ್ಟ ಜಿಲ್ಲಾ ಉಪ ನಿರ್ದೇಶಕರುಗಳಿಗೆ – ಮಾಹಿತಿಗಾಗಿ.
2. ಸಂಭಂದಪಟ್ಟ ಪದವಿ ಪೂರ್ವ ಕಾಲೇಜುಗಳ ಪ್ರಾಂಶುಪಾಲರುಗಳಿಗೆ.
3. ಕಛೇರಿ ಪ್ರತಿ.